ದಿನಾಂಕ 04-11-2023 ರಂದು ಸಾಕ್ಷಿಯನ್ನು ಮರಳಿ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಪಾಟೀಸವಾಲುಃ ಎದುರುದಾರರ ಪರ ಶ್ರೀ ಎಸ್.ಆರ್ ವಕೀಲರಿಂದ ಶ್ರೀ ಜಿ.ಪಿ.ಎಸ್ ವಕೀಲರ ಪರವಾಗಿ**

1) ಈಗ ನಾನು ಹೊನ್ನಾವರದಲ್ಲಿ ವಾಸವಾಗಿದ್ದೇನೆ. ನಾನು ಮೊದಲಿನಿಂದಲೂ ಹೊನ್ನಾವರದಲ್ಲಿ ವಾಸವಾಗಿದ್ದೇನೆ. ಈಗ ನಾನು ಕಳೆದ 1 ವರ್ಷದಿಂದ ಹೊನ್ನಾವರದಲ್ಲಿ ದಿನಗೂಲಿ ಮೇಲೆ ಗಾರೆ ಕೆಲಸ ಮಾಡುತ್ತಿದ್ದೇನೆ.

2) ನಾನು 2 ನೇ ಪಕ್ಷಗಾರನ ಕಾರ್ಖಾನೆಯಲ್ಲಿ 2011 ರಿಂದ ತೆಂಗಿನಕಾಯಿ ಒಡೆಯುವ ಕೆಲಸ ಮಾಡುತ್ತಿದ್ದೆನು. ನಾನು 2011 ರಿಂದ 2019 ರ ವರೆಗೆ 2 ನೇ ಪಕ್ಷಗಾರನ ಕಾರ್ಖಾನೆಯಲ್ಲಿ ಕೆಲಸ ಮಾಡಿರುತ್ತೇನೆ. ಮೊದಲು 3 ತಿಂಗಳು ನಾನು ತರಬೇತಿ ಅವಧಿಯಲ್ಲಿ ಪ್ರತಿದಿನ ರೂಪಾಯಿ 150 ರಂತೆ ದಿನಗೂಲಿ ಪಡೆಯುತ್ತಿದ್ದೆನು. ನಾನು ಕಾರ್ಖಾನೆಯ ಯಂತ್ರಗಳ ರಿಪೇರಿಗೆ ಸಹಾಯಕನೆಂದು ಸಹ ಕೆಲಸ ಮಾಡಿರುತ್ತೇನೆ. 2 ನೇ ಪಕ್ಷಗಾರ ಕಾರ್ಖಾನೆಯಲ್ಲಿ ಕೆಲಸ ಇದೆ ಎಂದು ನನಗೆ ಏಜೆಂಟ್ ಮೂಲಕ ಗೊತ್ತಾಗಿರುತ್ತದೆ. ನಾನು ಪ್ರತಿದಿನ ದಿನಗೂಲಿ ಪಡೆಯುತ್ತಿದ್ದೆನು. ನನಗೆ ಪ್ರತಿದಿನ ರೂಪಾಯಿ 150 ರಂತೆ ವಾರದ ಕೊನೆಯಲ್ಲಿ ದಿನಗೂಲಿ ಕೊಡುತ್ತಿದ್ದರು. ನಾನು ಕೆಲಸ ಮಾಡಿದ ದಿನಕ್ಕೆ ಮಾತ್ರ ದಿನಗೂಲಿ ಕೊಡುತ್ತಿದ್ದರು. ದಿನಗೂಲಿ ಕೆಲಸ ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. 2 ನೇ ಪಕ್ಷಗಾರ ಕಾರ್ಖಾನೆಯಲ್ಲಿ ನಾನು ದಿನಗೂಲಿ ಕೆಲಸಕ್ಕೆ ಸೇರಿದ ಬಗ್ಗೆ ಯಾವುದೇ ಆದೇಶ ಇರುವುದಿಲ್ಲ. ಕೆಲಸ ಇದ್ದಾಗ ಮಾತ್ರ ಕಾರ್ಮಿಕರಿಗೆ ಕೆಲಸಕ್ಕೆ ಬರಲು ಹೇಳುತ್ತಿದ್ದರು. ಕಾರ್ಖಾನೆಯ ಎಲ್ಲಾ ಕಾರ್ಮಿಕರಿಗೆ ಪ್ರತಿದಿನ ಕೆಲಸ ಇರುತ್ತಿರಲಿಲ್ಲ ಎನ್ನುವುದು ಸರಿಯಲ್ಲ.

3) ನನ್ನ ಮನೆಯಿಂದ ಕಾರ್ಖಾನೆ ಬಹಳ ದೂರದಲ್ಲಿ ಇರುತ್ತದೆ. ನಾನು ಕಾರ್ಖಾನೆಯ ಕೋಣೆಯಲ್ಲಿಯೇ ಆಗ ವಾಸವಾಗಿದ್ದೆನು. ಕಾರ್ಖಾನೆಯಲ್ಲಿ 45 ರಿಂದ 70 ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಕಾರ್ಖಾನೆಯವರು ನನಗೆ ಸಂಬಳ ಪಾವತಿ ಮಾಡುವುದು ಬಾಕಿ ಉಳಿದಿರುವುದಿಲ್ಲ. ನಾನು ಕಾರ್ಖಾನೆಯಲ್ಲಿ ಕೆಲಸ ಮಾಡಿದ ಕುರಿತು ಯಾವುದೇ ದಾಖಲೆ ಇರುವುದಿಲ್ಲ.

4) ನನ್ನ ಅರ್ಜಿ ಮತ್ತು ಮುಖ್ಯವಿಚಾರಣೆಯ ಪ್ರಮಾಣ ಪತ್ರ ಬರೆಯಲು ನಾನೇ ಮಾಹಿತಿ ಕೊಟ್ಟಿದ್ದೇನೆ. ನಾನು 8 ನೇ ತರಗತಿ ಓದುವಾಗ ವಿದ್ಯಾಭ್ಯಾಸ ನಿಲ್ಲಿಸಿದ್ದೇನೆ. ನನಗೆ ಸರಿಯಾಗಿ ಓದಲು ಬರೆಯಲು ಬರುವುದಿಲ್ಲ. ನನ್ನ ಅರ್ಜಿ ಮತ್ತು ಮುಖ್ಯವಿಚಾರಣೆಯಲ್ಲಿ ಬರೆದಿರುವ ಸಂಗತಿಗಳನ್ನು ನನ್ನ ವಕೀಲರು ನನಗೆ ಕನ್ನಡದಲ್ಲಿ ತಿಳಿಸಿ ಹೇಳಿರುತ್ತಾರೆ. ದಿನಾಂಕ 16-04-2011 ರಿಂದ 08-07-2019 ರವರೆಗೆ ನಾನು ಕಾರ್ಖಾನೆಯಲ್ಲಿ ಕೆಲಸ ಮಾಡಿದ ಬಗ್ಗೆ ದಾಖಲೆಯನ್ನು ವಕೀಲರಿಗೆ ಕೊಟ್ಟಿರುವುದಿಲ್ಲ. ಸದರಿ ವಿಷಯವಾಗಿ ನಾನು ಯಾವುದೇ ದಾಖಲೆ ಹಾಜರು ಮಾಡಿಲ್ಲ ಎನ್ನುವುದು ಸರಿಯಲ್ಲ. ನನಗೆ ಮಾಸಿಕ ರೂಪಾಯಿ 21 ಸಾವಿರ ಸಂಬಳ ಬರುತ್ತಿತ್ತು ಎಂದು ಯಾವುದೇ ದಾಖಲೆ ಕೊಟ್ಟಿರುವುದಿಲ್ಲ. ನನಗೆ ಮಾಸಿಕ ರೂಪಾಯಿ 21 ಸಾವಿರ ಸಂಬಳ ಇದ್ದ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ.

5) 2 ನೇ ಪಕ್ಷಗಾರ ಕಾರ್ಖಾನೆ ಈಗ ಕಾರ್ಯನಿರ್ವಹಿಸುತ್ತಿಲ್ಲ. 2 ನೇ ಪಕ್ಷಗಾರ ಕಾರ್ಖಾನೆ 2019 ರಲ್ಲಿ ಮುಚ್ಚಿರುತ್ತದೆ. ಯಾವ ತಿಂಗಳಿನಲ್ಲಿ 2 ನೇ ಪಕ್ಷಗಾರ ಕಾರ್ಖಾನೆ ಮುಚ್ಚಿತ್ತು ಎಂದು ನನಗೆ ಹೇಳಲು ಬರುವುದಿಲ್ಲ. ಯಾವ ಕಾರಣಕ್ಕೆ ಕಾರ್ಖಾನೆಯ ಉತ್ಪಾದನೆ ನಿಲ್ಲಿಸಿತ್ತು ಎಂದು ನನಗೆ ಹೇಳಲು ಬರುವುದಿಲ್ಲ. ನಾನು ಕಾರ್ಖಾನೆ ಮುಚ್ಚುವ ಕಾಲಕ್ಕೆ ಕೆಲಸ ಮಾಡದೇ ಇದ್ದ ಕಾರಣ ಯಾವ ಕಾರಣಕ್ಕೆ ಕಾರ್ಖಾನೆ ಮುಚ್ಚಿತ್ತು ಎಂದು ನನಗೆ ಗೊತ್ತಿಲ್ಲ ಎನ್ನುವುದು ಸರಿಯಲ್ಲ.

6) ನನಗೆ ಕಾರ್ಖಾನೆಯಿಂದ ಭವಿಷ್ಯ ನಿಧಿ ಮತ್ತು ಕಾರ್ಮಿಕ ವಿಮಾ ಯೋಜನೆಯ ಸೌಲಭ್ಯ ದೊರಕಿರುತ್ತದೆ. ನಾನು ಕೆಲಸಕ್ಕೆ ಸೇರಿದಾಗಿನಿಂದ ಭವಿಷ್ಯ ನಿಧಿ ಮತ್ತು ಕಾರ್ಮಿಕ ವಿಮಾ ಯೋಜನೆಯ ಸೌಲಭ್ಯ ನನಗೆ ದೊರಕಿರುತ್ತದೆ. ಸದರಿ ವಿಷಯವಾಗಿ ನಾನು ದಾಖಲೆ ಹಾಜರು ಮಾಡಿಲ್ಲ ಎನ್ನುವುದು ಸರಿಯಲ್ಲ. ಕೆಲಸ ಸೇರಿದಾಗಿನಿಂದ ನನಗೆ ಭವಿಷ್ಯ ನಿಧಿ ಮತ್ತು ಕಾರ್ಮಿಕ ವಿಮಾ ಯೋಜನೆ ಸೌಲಭ್ಯ ದೊರಕಿದೆ ಎಂದು ಸುಳ್ಳು ಹೇಳುತ್ತೇನೆ ಎನ್ನುವುದು ಸರಿಯಲ್ಲ. 2015-16 ನೇ ಸಾಲಿನ ಭವಿಷ್ಯ ನಿಧಿಯ ದಾಖಲೆ ಮಾತ್ರ ಹಾಜರುಮಾಡಿದ್ದೇನೆ ಎನ್ನುವ ಬಗ್ಗೆ ಗೊತ್ತಿರುವುದಿಲ್ಲ. ನಾನು ಬೇರೆ ಅವಧಿಯಲ್ಲಿ 2 ನೇ ಪಕ್ಷಗಾರ ಕಾರ್ಖಾನೆಯಲ್ಲಿ ಕೆಲಸ ಮಾಡದ ಕಾರಣ ನನಗೆ ಭವಿಷ್ಯ ನಿಧಿ ಮತ್ತು ಕಾರ್ಮಿಕ ವಿಮಾ ಯೋಜನೆಯ ಸೌಲಭ್ಯ ಪೂರೈಸಿಲ್ಲ ಎನ್ನುವುದು ಸರಿಯಲ್ಲ. ನಾನು 2011 ರಿಂದ

2019 ರವರೆಗೆ 2 ನೇ ಪಕ್ಷಗಾರ ಕಾರ್ಖಾನೆಯಲ್ಲಿ ಕೆಲಸ ಮಾಡಿದಲ್ಲಿ ಪೂರ್ಣ ಅವಧಿಗೆ ಭವಿಷ್ಯ ನಿಧಿ ಮತ್ತು ಕಾರ್ಮಿಕ ಯೋಜನೆಯ ಸೌಲಭ್ಯ ದೊರಕುತ್ತಿತ್ತು ಎನ್ನುವುದು ಸರಿಯಲ್ಲ. ನಾನು ಭವಿಷ್ಯ ನಿಧಿ ಹಣವನ್ನು ಪಡೆದುಕೊಂಡಿದ್ದೇನೆ. ನಾನು ನನ್ನ ಕೆಲಸಕ್ಕೆ ರಾಜೀನಾಮೆ ಕೊಟ್ಟು ಭವಿಷ್ಯ ನಿಧಿ ಹಣ ಪಡೆದುಕೊಂಡಿರುವುದಿಲ್ಲ. ನಾನು 2 ನೇ ಪಕ್ಷಗಾರ ಕಾರ್ಖಾನೆಗೆ ರಾಜೀನಾಮೆ ಕೊಟ್ಟು ಎಲ್ಲಾ ಭವಿಷ್ಯ ನಿಧಿ ಹಣವನ್ನು ಪಡೆದುಕೊಂಡಿದ್ದೇನೆ ಎನ್ನುವುದು ಸರಿಯಲ್ಲ.

7) ನಾನು ಕಾರ್ಮಿಕ ವಿಮಾ ಯೋಜನೆಯ ಕುರಿತಾದ ದಾಖಲೆ ಹಾಜರು ಮಾಡಿಲ್ಲ ಎನ್ನುವುದು ಸರಿಯಲ್ಲ. ಕಾರ್ಮಿಕ ವಿಮಾ ಯೋಜನೆಯ ದಾಖಲೆಯಲ್ಲಿ ನಾನು ದಿನಾಂಕ 01-05-2016 ರಂದು ಕೆಲಸಕ್ಕೆ ಸೇರಿಕೊಂಡಿದ್ದೇನೆ ಎಂದು ಉಲ್ಲೇಖ ಇರುತ್ತದೆ ಎನ್ನುವ ಬಗ್ಗೆ ಗೊತ್ತಿರುವುದಿಲ್ಲ. ದಿನಾಂಕ 29-11-2016 ರಂದು ನಾನು ಕಾರ್ಮಿಕ ವಿಮಾ ಯೋಜನೆಯಲ್ಲಿ ನೊಂದಣಿ ಮಾಡಿಕೊಂಡಿದ್ದೇನೆ ಎನ್ನುವುದು ಸರಿಯಲ್ಲ. ಸದರಿ ವಿಮಾ ಯೋಜನೆಯು ದಿನಾಂಕ 28-12-2016 ರವರೆಗೆ ಮಾತ್ರ ಉರ್ಜಿತ ಇತ್ತು ಎನ್ನುವುದು ಸರಿಯಲ್ಲ. ಸದರಿ ದಾಖಲೆಯ ಪ್ರಕಾರ ನಾನು ಕೇವಲ 6 ತಿಂಗಳು ಮಾತ್ರ 2 ನೇ ಪಕ್ಷಗಾರ ಕಾರ್ಖಾನೆಯಲ್ಲಿ ಕೆಲಸ ಮಾಡಿದ್ದೇನೆ ಎನ್ನುವುದು ಸರಿಯಲ್ಲ. ನಾನು ದಿನಗೂಲಿ ನೌಕರನಾಗಿದ್ದರೂ ಸಹ ಕಾರ್ಖಾನೆಯವರು ಮಾನವೀಯತೆಯ ನೆಲೆಯಲ್ಲಿ ನನಗೆ ಕಾರ್ಮಿಕ ವಿಮಾ ಯೋಜನೆಯ ಸೌಲಭ್ಯ ಒದಗಿಸಿದ್ದರು ಎನ್ನುವುದು ಸರಿಯಲ್ಲ.

8) 2 ನೇ ಪಕ್ಷಗಾರ ಕಾರ್ಖಾನೆಯು ಯಾವ ಕಾರಣಕ್ಕೆ ಮುಚ್ಚಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ನಾನು ವಿಚಾರಿಸಿದಾಗ ಕಾರ್ಖಾನೆಯವರು ಏಕೆ ಮುಚ್ಚಿದ್ದೇವೆ ಎಂದು ಹೇಳಿರುವುದಿಲ್ಲ. ನಾನು ಕಾರ್ಖಾನೆ ಮುಚ್ಚುವ ಕಾಲಕ್ಕೆ ಕೆಲಸ ಮಾಡದೇ ಇದ್ದ ಕಾರಣ ಯಾವ ಕಾರಣಕ್ಕೆ ಕಾರ್ಖಾನೆ ಮುಚ್ಚಿತ್ತು ಎಂದು ನನಗೆ ಗೊತ್ತಿಲ್ಲ ಎನ್ನುವುದು ಸರಿಯಲ್ಲ. ಕಾರ್ಖಾನೆಯವರು ನಮ್ಮನ್ನು ವಜಾ ಮಾಡಿರುವುದಿಲ್ಲ. ನಾನು ಸಂಘಟನೆ ಮೂಲಕ ಕಾರ್ಮಿಕ ಇಲಾಖೆಗೆ ಅರ್ಜಿ ಕೊಟ್ಟಿದ್ದೇನೆ. ಕಾರ್ಮಿಕ ಇಲಾಖೆಗೆ ಕೊಟ್ಟ ಅರ್ಜಿಯಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿದೆ. ಸದರಿ ಅರ್ಜಿಗೆ ನಾನು ಸಹಿ ಮಾಡಿರುತ್ತೇನೆ. ಅರ್ಜಿ ಕೊಡುವ ಸಮಯಕ್ಕೆ ನಾನು ಕಾರ್ಮಿಕ ಇಲಾಖೆಯ ಕಚೇರಿಗೆ ಹೋಗಿದ್ದ ಬಗ್ಗೆ ನೆನಪಿರುವುದಿಲ್ಲ. ಅರ್ಜಿಯಲ್ಲಿ ಯಾವ ಕಾರಣಕ್ಕೆ ನನ್ನ ಕೆಲಸ ಹೋಗಿತ್ತು ಎಂದು ಉಲ್ಲೇಖ

ಮಾಡಿರುವುದಿಲ್ಲ. ನಾನು ಕಾರ್ಮಿಕ ಇಲಾಖೆಗೆ ಕೊಟ್ಟ ಅರ್ಜಿಯಲ್ಲಿ ಕಾರ್ಖಾನೆಯವರು ನನನ್ನು ಕೆಲಸದಿಂದ ವಜಾ ಮಾಡಿರುವುವರು ಎಂದು ಉಲ್ಲೇಖ ಮಾಡಿದ್ದೇನೆ ಎನ್ನುವುದು ಸರಿಯಲ್ಲ. ನಾನು ಕಾರ್ಮಿಕ ಇಲಾಖೆಗೆ ಎಂದು ಅರ್ಜಿ ಕೊಟ್ಟಿದ್ದೇನೆ ಎಂದು ನೆನಪಿರುವುದಿಲ್ಲ.

9) ನಾನು ಕೆಲಸಕ್ಕೆ ರಾಜೀನಾಮೆ ಕೊಟ್ಟು ಎಲ್ಲಾ ಸೌಲಭ್ಯವನ್ನು ಪಡೆದುಕೊಂಡಿದ್ದೇನೆ ಎನ್ನುವುದು ಸರಿಯಲ್ಲ. ನಾನು ಹಾಜರುಪಡಿಸಿರುವ ಯಾವುದೇ ದಾಖಲೆಯಲ್ಲಿ 2011 ರಿಂದ 2019 ರವರೆಗೆ ನಾನು ಕಾರ್ಖಾನೆಯಲ್ಲಿ ಕೆಲಸ ಮಾಡಿದ್ದೇನೆಂದು ತೋರಿಸುವುದಿಲ್ಲ ಎನ್ನುವ ಬಗ್ಗೆ ಗೊತ್ತಿರುವುದಿಲ್ಲ.

10) ನಿಪಿ-17 ನಾನು ಕಾರ್ಖಾನೆಗೆ ಕೊಟ್ಟ ನನ್ನ ಕುಟುಂಬದ ಮಾಹಿತಿ ಇರುತ್ತದೆ ಎನ್ನವುದು ಸರಿಯಲ್ಲ. ನಿಪಿ-17 ಕಾರ್ಮಿಕ ವಿಮಾ ಯೋಜನೆಗೆ ಸಂಬಂಧಪಟ್ಟ ದಾಖಲೆ ಅಲ್ಲ ಎನ್ನುವುದು ಸರಿಯಲ್ಲ.

11) 2019 ರಲ್ಲಿ 2 ನೇ ಪಕ್ಷಗಾರ ಕಾರ್ಖಾನೆ ನಷ್ಟವಿದ್ದ ಕಾರಣ ಮುಚ್ಚಿ ಹೋಗಿತ್ತು ಎನ್ನುವುದು ಸರಿಯಲ್ಲ. ಸದರಿ ಕಾರ್ಖಾನೆ ನಷ್ಟದಲ್ಲಿ ನಡೆಯುತ್ತಿತ್ತು ಎನ್ನುವುದು ಸರಿಯಲ್ಲ. ಕಾರ್ಖಾನೆ ಮುಚ್ಚುವ ಕಾಲಕ್ಕೆ ನಾನು ಅಲ್ಲಿಯೇ ಕೆಲಸ ಮಾಡುತ್ತಿರದ ಕಾರಣ ಅದು ನಷ್ಟದಲ್ಲಿ ಇತ್ತು ಎಂದು ನನಗೆ ಗೊತ್ತಿತ್ತು ಎನ್ನುವುದು ಸರಿಯಲ್ಲ. ನಾನು ರಾಜೀನಾಮೆ ಕೊಟ್ಟು ಕಾರ್ಖಾನೆಯಲ್ಲಿ ಕೆಲಸ ಮಾಡದೇ ಇದ್ದ ಕಾರಣ ಕಾರ್ಖಾನೆ ಮುಚ್ಚುವ ಕಾಲಕ್ಕೆ ನನಗೆ ನೋಟಿಸು ಕೊಡುವ ಅವಶ್ಯಕತೆ ಇರಲಿಲ್ಲ ಎನ್ನುವುದು ಸರಿಯಲ್ಲ. ನಾನು ಕಾರ್ಖಾನೆಯವರಿಗೆ ಸಂಪರ್ಕಿಸಿ ಕೆಲಸ ಕೊಡು ಎಂದು ಕೇಳಿಯೇ ಇಲ್ಲ ಎನ್ನುವುದು ಸರಿಯಲ್ಲ. ಕಾರ್ಖಾನೆ ಮುಚ್ಚಿದ್ದ ಬಗ್ಗೆ ತಿಳಿದ ನಂತರ ಅಕ್ರಮವಾಗಿ ದುರ್ಲಾಭ ಪಡೆಯಲೆಂದು ನಾನು ಈ ಅರ್ಜಿ ಹೂಡಿದ್ದೇನೆ ಎನ್ನುವುದು ಸರಿಯಲ್ಲ. ನಾನು ಬೇರೆಯವರ ಕುಮ್ಮಕ್ಕಿನಿಂದ ಕಾರ್ಮಿಕ ಇಲಾಖೆಗೆ ಅರ್ಜಿ ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ. ಕಾರ್ಮಿಕ ಇಲಾಖೆಗೆ ಕೊಟ್ಟ ಅರ್ಜಿಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎನ್ನುವುದು ಸರಿಯಲ್ಲ. ನಾನು ಕಾರ್ಖಾನೆ ಮುಚ್ಚಿದ ಸಮಯದಲ್ಲಿ ಕೆಲಸ ಮಾಡದೇ ಇದ್ದ ಕಾರಣ ಮತ್ತು ಕಾರ್ಮಿಕನಿರದ ಕಾರಣ 3 ತಿಂಗಳ ಸಂಬಳ ಪಡೆಯುವ ಯಾವುದೇ ಅರ್ಹತೆ ಇಲ್ಲ ಎನ್ನುವುದು ಸರಿಯಲ್ಲ. ಅರ್ಜಿಯಲ್ಲಿ ಕೇಳಿರುವ ಯಾವುದೇ ಪರಿಹಾರ ಪಡೆಯುವ

ಅರ್ಹತೆ ನನಗೆ ಇಲ್ಲ ಎನ್ನುವುದು ಸರಿಯಲ್ಲ. ನನ್ನ ಅರ್ಜಿ ಮತ್ತು ಮುಖ್ಯವಿಚಾರಣೆಯಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸುಳ್ಳು ಇರುತ್ತದೆ ಎನ್ನುವುದು ಸರಿಯಲ್ಲ. ನಾನು ಕಾರ್ಖಾನೆಯಿಂದ ಎಲ್ಲಾ ಸೌಲಭ್ಯ ಪಡೆದಿರುವ ಕಾರಣ ಹಾಗೂ ನಿರಂತರ ಕಾರ್ಮಿಕನಿರದ ಕಾರಣ ನನಗೆ ಗ್ರಾಚ್ಯುಟಿ ಪಡೆಯುವ ಅರ್ಹತೆ ಇಲ್ಲ ಎನ್ನುವುದು ಸರಿಯಲ್ಲ.

-ಮರುವಿಚಾರಣೆ - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಶಾಂತವೀರ ಶಿವಪ್ಪ)
ಪ್ರಧಾನ ಜಿಲ್ಲಾ/ಕಾರ್ಮಿಕ ನ್ಯಾಯಾಧೀಶರು
ಜಿಲ್ಲಾ ನ್ಯಾಯಾಲಯ, ಉಡುಪಿ